# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | 597 (681) |
| ಮಾನ್ಯ ಸದಸ್ಯರ ಹೆಸರು | ಶ್ರೀ ಐವನ್ ಡಿ'ಸೋಜಾ<br>(ವಿಧಾನ ಸಭೆಯಿಂದ ಚುನಾಯಿತರಾದವರು) |
| ಉತ್ತರಿಸಬೇಕಾದ ದಿನಾಂಕ | 12 /12/2025 |
| ಉತ್ತರಿಸುವವರು | ಮಾನ್ಯ ಕಾರ್ಮಿಕ ಸಚಿವರು |

| ಕ್ರ.ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ಅಸಂಘಟಿತ ಕಾರ್ಮಿಕರಿಗೆ ನೀಡುವ ವಾಣಿಜ್ಯ ವಾಹನಗಳ ಚಾಲಕ ಮತ್ತು ವಾಣಿಜ್ಯ ವಾಹನಗಳ ಸಿಬ್ಬಂದಿಗಳಿಗೆ ನೀಡುವ ನೂತನ ಯೋಜನೆಯಡಿಯಲ್ಲಿ ರಾಜ್ಯದ್ಯಂತ ಫಲಾನುಭವಿಗಳ ಸಂಖ್ಯೆ ಎಷ್ಟು (ಜಿಲ್ಲಾವಾರು ವಿವರ ನೀಡುವುದು) | ಕರ್ನಾಟಕ ಮೋಟಾರು ಸಾರಿಗೆ ಮತ್ತು ಇತರೆ ಸಂಬಂಧಿತ ಕಾರ್ಮಿಕರ ಸಾಮಾಜಿಕ ಭದ್ರತೆ ಮತ್ತು ಕ್ಷೇಮಾಭಿವೃದ್ಧಿ ಯೋಜನೆಯಡಿ ರಾಜ್ಯಾದ್ಯಂತ ಈವರೆಗೆ 10,05,551 ಫಲಾನುಭವಿಗಳನ್ನು ನೋಂದಾಯಿಸಲಾಗಿದ್ದು, ಜಿಲ್ಲಾವಾರು ವಿವರವನ್ನು **ಅನುಬಂಧ-1**ರಲ್ಲಿ ಲಗತ್ತಿಸಿದೆ. |
| ಆ) | ವಾಣಿಜ್ಯ ವಾಹನ ನೋಂದಾಯಿಸಲಾದ ಚಾಲಕರುಗಳಿಗೆ ಬ್ಯಾಡ್ಜ್ ಕಡ್ಡಾಯ ಎಂಬ ನಿಯಮ ಇದೆಯೇ: ಈ ಬಗ್ಗೆ ಇಲಾಖೆಯ ನಿಲುವು ಏನು: (ವಿವರ ನೀಡುವುದು) | ಕರ್ನಾಟಕ ರಾಜ್ಯ ಖಾಸಗಿ ವಾಣಿಜ್ಯ ಸಾರಿಗೆ ಕಾರ್ಮಿಕರ ಅಪಘಾತ ಪರಿಹಾರ ಯೋಜನೆಯಡಿ ಖಾಸಗಿ ವಾಣಿಜ್ಯ ಸಾರಿಗೆ ಕಾರ್ಮಿಕರಾದ ಚಾಲಕರುಗಳಿಗೆ ನೋಂದಾಯಿಸಲು ಸರ್ಕಾರದ ಆದೇಶ ಸಂಖ್ಯೆ ಕಾಇ 40 ಎಲ್ ಡಬ್ಲ್ಯೂಎ 2011 ದಿನಾಂಕ:12-01-2021ರ ಆದೇಶದನ್ವಯ ಚಾಲಕನರನ್ನು ನೋಂದಾಯಿಸಲು ಬ್ಯಾಡ್ಜ್ ಸಂಖ್ಯೆ ಕಡ್ಡಾಯವಾಗಿರುತ್ತದೆ.<br><br>ಆದರೆ ಕರ್ನಾಟಕ ಮೋಟಾರು ಸಾರಿಗೆ ಮತ್ತು ಇತರೆ ಸಂಬಂಧಿತ ಕಾರ್ಮಿಕರ ಸಾಮಾಜಿಕ ಭದ್ರತೆ ಮತ್ತು ಕ್ಷೇಮಾಭಿವೃದ್ಧಿ ನಿಯಮಾವಳಿ, 2024 ರನ್ವಯ ಮೋಟಾರು ಸಾರಿಗೆ ಮತ್ತು ಇತರೆ ಸಂಬಂಧಿತ ಕಾರ್ಮಿಕರಿಗೆ ಸಾಮಾಜಿಕ ಭದ್ರತಾ ಸೌಲಭ್ಯಗಳನ್ನು ಜಾರಿಗೊಳಿಸುತ್ತಿದ್ದು,<br>ಚಾಲಕರುಗಳನ್ನು ನೋಂದಾಯಿಸಲು "ಮೋಟಾರು ವಾಹನ ಕಾಯ್ದೆ 1988 ಕಲಂ 292 ರಲ್ಲಿ **Light motor vehicle means a transport vehicle or omnibus the gross vehicle weight of either of which or a motorcar or tractor or road-roller the unladen weight of any of which, does not exceed [7500] kilograms** ಎಂದಿರುತ್ತದೆ.<br><br>ಆದುದರಿಂದ, ಲಘು ಮೋಟಾರು ವಾಹನಗಳನ್ನು ಚಲಾಯಿಸಲು ಚಾಲನಾ ಅನುಜ್ಞಾ ಪತ್ರವನ್ನು |
| ಇ) | ರಿಕ್ಷಾ ಚಾಲಕರುಗಳಿಗೆ ಬ್ಯಾಡ್ಜ್ ಕಡ್ಡಾಯ ಬೇಡವೆಂಬ ನಿಯಮವಿದ್ದು, ಈ ಬಗ್ಗೆ ಇಲಾಖೆ ಯಾವ ರೀತಿ ಧೋರಣೆ ಅನುಸರಿಸುತ್ತಿವೆ: | |

| | | |
|---|---|---|
| | | ಹೊಂದಿರುವಂತಹ ಚಾಲಕರು 7500ಕ್ಕಿಂತ ಕಡಿಮೇ ತೂಕ ಹೊಂದಿರುವಂತ ವಾಹನವನ್ನು ಚಲಾಯಿಸಬಹುದಾಗಿರುತ್ತದೆ. 7500ಕಿಂತ ಹೆಚ್ಚುವರಿ ತೂಕದ ವಾಹನವನ್ನು ಚಲಾಯಿಸುವ ವಾಹನ ಚಾಲಕರು ಕಡ್ಡಾಯವಾಗಿ ಬ್ಯಾಡ್ಜ್ ಸಂಖ್ಯೆಯನ್ನು ಹೊಂದಿರ ಬೇಕಾಗಿರುತ್ತದೆ. ಎಂದ ಸಾರಿಗೆ ಇಲಾಖೆವತಿಯಿಂದ ಸ್ಪಷ್ಟೀಕರಣ ನೀಡಲಾಗಿರುತ್ತದೆ.<br><br>ಚಾಲಕರ ನೋಂದಣಿ ವಿಷಯಕ್ಕೆ ಸಂಬಂಧಿಸಿದಂತೆ ಸಾರಿಗೆ ಇಲಾಖೆಯವರು ನೀಡಿರುವ ಅಭಿಪ್ರಾಯದಂತೆ ಲಘು ಮೋಟಾರು ವಾಹನ ಚಾಲನಾ ಪರವಾನಗಿ ಪತ್ರ ಹೊಂದಿರುವ ಚಾಲಕರು ಬ್ಯಾಡ್ಜ್ ಸಂಖ್ಯೆ ಹೊಂದಿಲ್ಲದೇ 7500ಕ್ಕಿಂತ ಕಡಿಮೆ ತೂಕ ಹೊಂದಿರುವ ವಾಹನಗಳನ್ನು ಚಲಾಯಿಸಬಹುದಾಗಿದ್ದು, ಪ್ರಸ್ತುತ ಇಂತಹ ಚಾಲಕರಿಗೆ ಮಾತ್ರ ಯೋಜನೆಯಡಿ ಫಲಾನುಭವಿಯಾಗಲು ಬ್ಯಾಡ್ಜ್ ಸಂಖ್ಯೆಯನ್ನು ಕಡ್ಡಾಯ ಮಾಡಿರುವುದಿಲ್ಲ. |
| ಈ) | ಅಸಂಘಟಿತ ಕಾರ್ಮಿಕರಿಗೆ ನೀಡುವ ಯಾವ ಯಾವ ಯೋಜನೆಗಳು ಪ್ರಸ್ತುತ ಚಾಲ್ತಿಯಲ್ಲಿದೆ ಅದರ ನಿಯಮಗಳೇನು? (ವಿವರ ನೀಡುವುದು) | ಕಾರ್ಮಿಕ ಇಲಾಖೆಯ ಅಧೀನದಲ್ಲಿ ಬರುವ, ಕರ್ನಾಟಕ ರಾಜ್ಯ ಅಸಂಘಟಿತ ಕಾರ್ಮಿಕರ ಸಾಮಾಜಿಕ ಭದ್ರತಾ ಮಂಡಳಿಯು ಜಾರಿಗೊಳಿಸುತ್ತಿರುವ ವಿವಿಧ ಯೋಜನೆಗಳಡಿ ಅರ್ಹ ಫಲಾನುಭವಿಗಳಿಗೆ ನೀಡಲಾಗುತ್ತಿರುವ ಸೌಲಭ್ಯಗಳು ಈ ಕೆಳಗಿನಂತಿವೆ.<br><br>**ಅಂಬೇಡ್ಕರ್ ಕಾರ್ಮಿಕ ಸಹಾಯ ಹಸ್ತ ಯೋಜನೆ :**<br><br>ಈ ಯೋಜನೆಯಡಿ ಅಸಂಘಟಿತ ವಲಯದಡಿ ಸೇವೆ ಸಲ್ಲಿಸುತ್ತಿರುವ ಕಾರ್ಮಿಕರು ಮತ್ತು ಹಿಂದುಳಿದ ವರ್ಗಗಳ ಪ್ರವರ್ಗ-1, 2ಎ, 3ಎ ಮತ್ತು 3ಬಿಗೆ ಸೇರಿದ ಪಾರಂಪರಿಕ ವೃತ್ತಿಯಲ್ಲಿ ತೊಡಗಿರುವ ಕಾರ್ಮಿಕರು ಹಾಗೂ ಅಲೆಮಾರಿ ಹಾಗೂ ಅರೆ ಅಲೆಮಾರಿ ಪಂಗಡದ ಕುಲಕಸುಬಿನ ವೃತ್ತಿ ಆಧಾರಿತ ಕೆಲಸದಲ್ಲಿ ತೊಡಗಿರುವ ಕಾರ್ಮಿಕರು ಸೇರಿದಂತೆ ಒಟ್ಟಾರೆ 101 ವರ್ಗಗಳ ಕಾರ್ಮಿಕರನ್ನು ಉಚಿತವಾಗಿ ನೋಂದಾಯಿಸಿ, ಈ ಕೆಳಕಂಡ ಸೌಲಭ್ಯಗಳನ್ನೊಳಗೊಂಡಂತೆ ಸ್ಮಾರ್ಟ್ ಕಾರ್ಡ್ ನೀಡಲಾಗುತ್ತಿದೆ.<br><br>**ಮಾನದಂಡ:-**<br><br>ಈ ಯೋಜನೆಯು ಕರ್ನಾಟಕ ರಾಜ್ಯಕ್ಕೆ ಮಾತ್ರ ಅನ್ವಯಿಸುತ್ತದೆ.<br>ವಯೋಮಿತಿ 18 ರಿಂದ 60 ವರ್ಷಗಳು.<br>ಯೋಜನೆಯಡಿ ಗುರುತಿಸಲಾದ 101 ವರ್ಗಗಳ ಅಸಂಘಟಿತ ಕಾರ್ಮಿಕರಿಗೆ ಮಾತ್ರ ಅನ್ವಯಿಸುತ್ತದೆ.<br>ಯೋಜನೆಯಡಿ ನೋಂದಣಿಯಾಗಲು ಅರ್ಜಿದಾರರು ಅಸಂಘಟಿತ ಕಾರ್ಮಿಕರ ಸಾಮಾಜಿಕ ಭದ್ರತಾ ಕಾಯ್ದೆ 2008ರ ಅನುಸೂಚಿ II ರಲ್ಲಿ ನಮೂದಿಸಿರುವ ಕಾಯ್ದೆಗಳ ವ್ಯಾಪ್ತಿಗೆ ಒಳಪಟ್ಟಿರಬಾರದು. |

**ಸೌಲಭ್ಯಗಳು:**

ಅ) **ಅಪಘಾತ ಪರಿಹಾರ ಸೌಲಭ್ಯ:**

ಅಪಘಾತದಿಂದ ಮರಣ ಹೊಂದಿದಲ್ಲಿ ಅವರ ನಾಮನಿರ್ದೇಶಿತರಿಗೆ ರೂ.1 ಲಕ್ಷ ಪರಿಹಾರ.
ಅಪಘಾತದಿಂದ ಶಾಶ್ವತ/ ಭಾಗಶಃ ದುರ್ಬಲತೆ ಹೊಂದಿದಲ್ಲಿ ರೂ.1.00 ಲಕ್ಷಗಳವರೆಗೆ ಪರಿಹಾರ (ಶೇಕಡವಾರು ದುರ್ಬಲತೆ ಆಧಾರದ ಮೇಲೆ).
ಆಸ್ಪತ್ರೆ ವೆಚ್ಚ ಮರುಪಾವತಿ ರೂ.50,000/-ಗಳವರೆಗೆ. (ಅಪಘಾತ ಪ್ರಕರಣಗಳಲ್ಲಿ ಮಾತ್ರ)

ಆ) **ಸಹಜ ಮರಣ ಪರಿಹಾರ ಮತ್ತು ಅಂತ್ಯಕ್ರಿಯೆ ವೆಚ್ಚ:** ಫಲಾನುಭವಿಯ ಕುಟುಂಬದವರಿಗೆ ಅಂತ್ಯಕ್ರಿಯೆ ವೆಚ್ಚಕ್ಕಾಗಿ ರೂ.10,000/-ಗಳ ಧನ ಸಹಾಯ.

**ಕರ್ನಾಟಕ ರಾಜ್ಯ ಗಿಗ್ ಕಾರ್ಮಿಕರ ವಿಮಾ ಯೋಜನೆ:**

ಇ-ಕಾಮರ್ಸ್ ವಲಯಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಸ್ವಿಗ್ಗಿ, ಜೊಮಾಟೋಗಳಂತಹ ಸಂಸ್ಥೆಗಳಲ್ಲಿ ಫುಡ್‌ಡೆಲಿವರಿ ಮಾಡುವ ಹಾಗೂ ಮುಂತಾದ ಡೆಲಿವರಿ ವೃತ್ತಿಯಲ್ಲಿ ತೊಡಗಿಕೊಂಡ ಎಲ್ಲಾ ಅಸಂಘಟಿತ ಗಿಗ್ ಕಾರ್ಮಿಕರು ಸೇವಾ ಸಿಂಧು ಪೋರ್ಟಲ್ ಮೂಲಕ ನೋಂದಾಯಿಸಿಕೊಂಡು ಯೋಜನೆಯ ಸೌಲಭ್ಯವನ್ನು ಪಡೆಯಬಹುದಾಗಿದೆ.
ಯೋಜನೆಯಡಿ ಅರ್ಹತೆಗಳು/ ಮಾನದಂಡಗಳು:

ಕರ್ನಾಟಕ ರಾಜ್ಯದಲ್ಲಿ ಕಾರ್ಯನಿರ್ವಹಿಸುತ್ತಿರುವ ಎಲ್ಲಾ ಪ್ಲಾಟ್‌ಫಾರ್ಮ್ ಆಧಾರಿತ ಗಿಗ್ ಕಾರ್ಮಿಕರು.
18-60 ವಯೋಮಾನದವರಾಗಿರಬೇಕು.
ಆದಾಯ ತೆರಿಗೆ ಪಾವತಿದಾರರಾಗಿರಬಾರದು.
ಇ.ಎಸ್.ಐ. ಮತ್ತು ಇ.ಪಿ.ಎಫ್ ಸೌಲಭ್ಯ ಹೊಂದಿರಬಾರದು.
ಇ-ಶ್ರಮ್ ಪೋರ್ಟಲ್‌ನಲ್ಲಿ ನೋಂದಣಿಯಾಗಿರಬೇಕು.
ಸೇವಾಸಿಂಧು ಪೋರ್ಟಲ್‌ನಲ್ಲಿ ನೋಂದಣಿಯಾಗಿರಬೇಕು.

**ಸೌಲಭ್ಯಗಳು:-**

ಅಪಘಾದಿಂದ ಮರಣ ಹೊಂದಿದಲ್ಲಿ ವಿಮಾ ಪರಿಹಾರ ರೂ2.00 ಲಕ್ಷ ಹಾಗೂ ರೂ2.00 ಲಕ್ಷ ಜೀವ ವಿಮಾ ಸೇರಿ ಒಟ್ಟು ರೂ.4.00 ಲಕ್ಷಗಳು.
ಅಪಘಾದಿಂದ ಶಾಶ್ವತ ದುರ್ಬಲತೆ ಹೊಂದಿದಲ್ಲಿ ರೂ.2.00 ಲಕ್ಷಗಳವರೆಗೆ

- ಆಸ್ಪತ್ರೆ ವೆಚ್ಚ ಮರುಪಾವತಿ ರೂ.1.00 ಲಕ್ಷಗಳವರೆಗೆ (ಅಪಘಾತ ಪ್ರಕರಣಗಳಿಗೆ ಮಾತ್ರ)
- ಜೀವ ವಿಮಾ ರೂ.2.00 ಲಕ್ಷಗಳು.

3. **ಕರ್ನಾಟಕ ರಾಜ್ಯ ದಿನಪತ್ರಿಕೆ ಹಾಗೂ ಹಾಲು**

**ವಿತರಣಾ ಕಾರ್ಮಿಕರ ಅಪಘಾತ ಪರಿಹಾರ ಮತ್ತು ವೈದ್ಯಕೀಯ ಸೌಲಭ್ಯ ಯೋಜನೆ:**

ಅಸಂಘಟಿತ ವಲಯದ ವ್ಯಾಪ್ತಿಯಲ್ಲಿ ಬರುವ ದಿನಪತ್ರಿಕೆ ಹಾಗೂ ಹಾಲು ವಿತರಿಸುವ ಕಾರ್ಮಿಕರು ಅರೆಕಾಲೀನ ವೃತ್ತಿ ನಿರ್ವಹಿಸುತ್ತಿದ್ದು, ಇಂತಹ ಕಾರ್ಮಿಕರಿಗೆ ಸಾಮಾಜಿಕ ಮತ್ತು ಆರ್ಥಿಕ ಭದ್ರತೆ ಒದಗಿಸುವ ಉದ್ದೇಶದಿಂದ ಈ ಯೋಜನೆಯನ್ನು ಜಾರಿಗೊಳಿಸಲಾಗುತ್ತಿದೆ.

**ಯೋಜನೆಯಡಿ ಅರ್ಹತೆಗಳು/ ಮಾನದಂಡಗಳು:**

- ಕರ್ನಾಟಕ ರಾಜ್ಯದ ನಿವಾಸಿಯಾಗಿರಬೇಕು.
- 16-70 ವಯೋಮಾನದವರಾಗಿರಬೇಕು.
- ಆದಾಯ ತೆರಿಗೆ ಪಾವತಿದಾರರಾಗಿರಬಾರದು.
- ಇ.ಎಸ್.ಐ. ಮತ್ತು ಇ.ಪಿ.ಎಫ್ ಸೌಲಭ್ಯ ಹೊಂದಿರಬಾರದು.
- ಇ-ಶ್ರಮ್ ಪೋರ್ಟಲ್‌ನಲ್ಲಿ "News Paper Boy" ವರ್ಗದಡಿ ನೋಂದಣಿಯಾಗಿರಬೇಕು.

- **ಸೌಲಭ್ಯಗಳು:**

- ಅಪಘಾತದಿಂದ ಮರಣ ಹೊಂದಿದಲ್ಲಿ ರೂ2.00 ಲಕ್ಷ.
- ಅಪಘಾತದಿಂದ ಶಾಶ್ವತ ದುರ್ಬಲತೆ ಹೊಂದಿದಲ್ಲಿ ರೂ.2.00 ಲಕ್ಷಗಳವರೆಗೆ (ಶೇಕಡವಾರು ದುರ್ಬಲತೆ ಆಧಾರದಮೇಲೆ).
- ಅಪಘಾತ ಅಥವಾ ಮಾರಣಾಂತಿಕ ಕಾಯಿಲೆ ಅಥವಾ ಗಂಭೀರ ಅನಾರೋಗ್ಯಕ್ಕೆ ತುತ್ತಾದಲ್ಲಿ ಆಸ್ಪತ್ರೆ ವೆಚ್ಚ ಮರುಪಾವತಿ ರೂ.1.00 ಲಕ್ಷಗಳವರೆಗೆ.

4. **ಕರ್ನಾಟಕ ಮೋಟಾರು ಸಾರಿಗೆ ಹಾಗೂ ಇತರೆ ಸಂಬಂಧಿತ ಕಾರ್ಮಿಕರ ಸಾಮಾಜಿಕ ಭದ್ರತೆ ಮತ್ತು ಕ್ಷೇಮಾಭಿವೃದ್ಧಿ ಮಂಡಳಿ (The Karnataka Motor Transport And Other Allied Workers Social Security and Welfare Board):**

ಮೋಟಾರು ಸಾರಿಗೆ ಹಾಗೂ ಇತರೆ ಸಂಬಂಧಿತ ಕಾರ್ಮಿಕರಿಗೆ ಸಾಮಾಜಿಕ ಭದ್ರತೆ ಹಾಗೂ ಕಲ್ಯಾಣ ಸೌಲಭ್ಯಗಳನ್ನು ಒದಗಿಸುವ ಉದ್ದೇಶದಿಂದ, ಅವಶ್ಯಕವಿರುವ ಸಂಪನ್ಮೂಲವನ್ನು ಕ್ರೋಢೀಕರಿಸಲು ಕರ್ನಾಟಕ ಮೋಟಾರು ಸಾರಿಗೆ ಮತ್ತು ಇತರೆ ಸಂಬಂಧಿತ ಕಾರ್ಮಿಕರ ಸಾಮಾಜಿಕ ಭದ್ರತಾ ಮತ್ತು ಕಲ್ಯಾಣ ಸುಂಕ ಅಧಿನಿಯಮ-2024 (Karnataka Motor Transport and Other Allied Workers Social Security and Welfare Cess Bill, 2024)ನ್ನು ರೂಪಿಸಿ ಜಾರಿಗೆ ತಂದಿದ್ದು, ಇದಕ್ಕನುಗುಣವಾಗಿ ಕರ್ನಾಟಕ ಮೋಟಾರು ಸಾರಿಗೆ ಮತ್ತು ಇತರ ಸಂಬಂಧಿತ ಕಾರ್ಮಿಕರ ಸಾಮಾಜಿಕ ಭದ್ರತೆ ಮತ್ತು ಕ್ಷೇಮಾಭಿವೃದ್ಧಿ

ನಿಯಮಾವಳಿಗಳು, 2024 ಅನ್ನು ರಚಿಸಿರುತ್ತದೆ. ಸದರಿ ಕಾಯ್ದೆಯ ಕಲಂ 3 ರನ್ವಯ ಕರ್ನಾಟಕ ಮೋಟಾರು ಸಾರಿಗೆ ಮತ್ತು ಇತರೆ ಸಂಬಂಧಿತ ಕಾರ್ಮಿಕರ ಸಾಮಾಜಿಕ ಭದ್ರತಾ ಮತ್ತು ಕ್ಷೇಮಾಭಿವೃದ್ಧಿ ಮಂಡಳಿಯನ್ನು ರಚಿಸಲಾಗಿರುತ್ತದೆ.

**ಮಾನದಂಡ:-**

- ಈ ಯೋಜನೆಯು ಕರ್ನಾಟಕ ರಾಜ್ಯಕ್ಕೆ ಮಾತ್ರ ಅನ್ವಯಿಸುತ್ತದೆ.
- ಯೋಜನೆಯು ಖಾಸಗಿ ವಾಣಿಜ್ಯ ಸಾರಿಗೆ ಕಾರ್ಮಿಕರಾದ ಚಾಲಕರು, ನಿರ್ವಾಹಕರು ಹಾಗೂ ಕ್ಲೀನರ್‌ಗಳಿಗೆ ಅನ್ವಯಿಸುತ್ತದೆ.
- ವಯೋಮಿತಿ 18 ರಿಂದ 70 ವರ್ಷಗಳು.
- ನಿರ್ವಾಹಕರು ಸಾರಿಗೆ ಇಲಾಖೆಯಿಂದ ನೀಡಲ್ಪಟ್ಟ ಊರ್ಜಿತ ನಿರ್ವಾಹಕ ಪತ್ರ ಹೊಂದಿರಬೇಕು.
- ನಿರ್ವಾಹಕರು ಹಾಗೂ ಕ್ಲೀನರ್‌ಗಳು ಸಾರಿಗೆ ವಾಹನದ ಮಾಲೀಕರಿಂದ ನಿಗದಿತ ನಮೂನೆಯಲ್ಲಿ ಉದ್ಯೋಗ ಪ್ರಮಾಣ ಪತ್ರವನ್ನು ಒದಗಿಸುವುದು.

ಈ ಕಾಯ್ದೆಯಡಿ ಸಂಗ್ರಹವಾಗಬಹುದಾದ ಅನುದಾನದಿಂದ ಅರ್ಹ ಕಾರ್ಮಿಕರಿಗೆ ಈ ಕೆಳಕಂಡ ಸೌಲಭ್ಯಗಳನ್ನು ಒದಗಿಸಲು ಪ್ರಸ್ತಾಪಿಸಲಾಗಿದೆ.

a. **ಅಪಘಾತ ಪರಿಹಾರ:**

- ಅಪಘಾತದಿಂದ ಫಲಾನುಭವಿಗಳು ನಿಧನರಾದಲ್ಲಿ, ನಾಮನಿರ್ದೇಶಿತರಿಗೆ ರೂ.5 ಲಕ್ಷ ಪರಿಹಾರ.
- ಅಪಘಾತದಿಂದ ಶಾಶ್ವತ ದುರ್ಬಲತೆ ಹೊಂದಿದಾಗ, ಫಲಾನುಭವಿಗೆ ದುರ್ಬಲತೆಯ ಪ್ರಮಾಣಕ್ಕನುಗುಣವಾಗಿ ರೂ.2 ಲಕ್ಷದವರೆಗೆ ಪರಿಹಾರ.
- ಅಪಘಾತದಿಂದ ತಾತ್ಕಾಲಿಕ ದುರ್ಬಲತೆ ಹೊಂದಿದಾಗ- ಗರಿಷ್ಠ ರೂ. 1 ಲಕ್ಷದವರೆಗೆ

b. **ನೈಸರ್ಗಿಕ ಮರಣ ಪರಿಹಾರ ಹಾಗೂ ಅಂತ್ಯ ಸಂಸ್ಕಾರ ವೆಚ್ಚ:** ಸಹಜ ಮರಣ ಹೊಂದಿದ ಫಲಾನುಭವಿಗಳ ಅವಲಂಬಿತರಿಗೆ ಅಂತ್ಯ ಸಂಸ್ಕಾರದ ವೆಚ್ಚವೂ ಸೇರಿದಂತೆ ರೂ.25,000/-ಗಳ ಪರಿಹಾರ.

c. **ಶೈಕ್ಷಣಿಕ ಧನಸಹಾಯ:** ನೋಂದಾಯಿತ ಮೋಟಾರು ಸಾರಿಗೆ ಮತ್ತು ಇತರೆ ಸಂಬಂಧಿತ ಕಾರ್ಮಿಕರ ಗರಿಷ್ಠ ಇಬ್ಬರು ಮಕ್ಕಳಿಗೆ:-

- 12ನೇ ತರಗತಿ ಅಥವಾ ತತ್ಸಮಾನ – ವಾರ್ಷಿಕ ತಲಾ ರೂ.3,000/-

| | | |
|---|---|---|
| | | • ಪದವಿ ಅಥವಾ ತತ್ಸಮಾನ – ವಾರ್ಷಿಕ ತಲಾ ರೂ.5,500/-<br>• ಇಂಜಿನಿಯರಿಂಗ್ ಹಾಗೂ ವೈದ್ಯಕೀಯ ಶಿಕ್ಷಣಕ್ಕಾಗಿ – ವಾರ್ಷಿಕ ತಲಾ ರೂ.8,000/-<br>• ಸ್ನಾತಕೋತ್ತರ ಪದವಿಗಾಗಿ – ವಾರ್ಷಿಕ ತಲಾ ರೂ.11,000/-<br><br>d. **ಅಪಘಾತದಿಂದ ನಿಧನರಾದ/ಸಂಪೂರ್ಣ ಶಾಶ್ವತ ದುರ್ಬಲತೆ ಹೊಂದಿದ ಮೋಟಾರು ಸಾರಿಗೆಮತ್ತು ಇತರೆ ಸಂಬಂಧಿತ ಕಾರ್ಮಿಕರ ಗರಿಷ್ಠ ಇಬ್ಬರು ಮಕ್ಕಳಿಗೆ:-**<br><br>• 1ನೇ ತರಗತಿಯಿಂದ ಪದವಿ ಅಥವಾ ತತ್ಸಮಾನ – ವಾರ್ಷಿಕ ತಲಾ ರೂ.10,000/-<br>• ಇಂಜಿನಿಯರಿಂಗ್ ಹಾಗೂ ವೈದ್ಯಕೀಯ ಶಿಕ್ಷಣಕ್ಕಾಗಿ – ವಾರ್ಷಿಕ ತಲಾ ರೂ.20,000/-<br>• ಸ್ನಾತಕೋತ್ತರ ಪದವಿಗಾಗಿ – ವಾರ್ಷಿಕ ತಲಾ ರೂ.25,000/-<br><br>e. **ಹೆರಿಗೆ ಸಹಾಯ ಧನ:** ನೋಂದಾಯಿತ ಮಹಿಳಾ ಫಲಾನುಭವಿಯ ಮೊದಲ ಎರಡು ಜೀವಂತ ಹೆರಿಗೆಗಳಿಗೆ ಮಾತ್ರ ಸೀಮಿತಗೊಂಡಂತೆ ತಲಾ ರೂ.10,000/-ಗಳಂತೆ ಹೆರಿಗೆ ಸಹಾಯಧನ. |

**ಕಾಇ 480 ಎಲ್‌ಇಟಿ 2025**

**(ಸಂತೋಷ್ ಎಸ್ ಲಾಡ್)**
**ಕಾರ್ಮಿಕ ಸಚಿವರು**

# ಅನುಬಂಧ - 01

| ಕ್ರ.ಸಂ. | ಜಿಲ್ಲೆ | ಕಾರ್ಮಿಕರ ಸಂಖ್ಯೆ |
|---|---|---|
| 1 | ಬಾಗಲಕೋಟೆ | 19443 |
| 2 | ಬಳ್ಳಾರಿ | 22593 |
| 3 | ಬೆಳಗಾವಿ | 56752 |
| 4 | ಬೆಂಗಳೂರು ಗ್ರಾಮಾಂತರ | 43651 |
| 5 | ಬೆಂಗಳೂರು ನಗರ | 178919 |
| 6 | ಬೀದರ್ | 28999 |
| 7 | ಚಾಮರಾಜನಗರ | 49084 |
| 8 | ಚಿಕ್ಕಬಳ್ಳಾಪುರ | 20385 |
| 9 | ಚಿತ್ರದುರ್ಗ | 28744 |
| 10 | ದಾವಣಗೆರೆ | 16686 |
| 11 | ಧಾರವಾಡ | 36704 |
| 12 | ಗದಗ | 22794 |
| 13 | ಹಾವೇರಿ | 19640 |
| 14 | ಕಲಬುರುಗಿ | 31736 |
| 15 | ಕೋಲಾರ | 22096 |
| 16 | ಕೊಪ್ಪಳ | 17949 |
| 17 | ಮಂಡ್ಯ | 27708 |
| 18 | ಮೈಸೂರು | 44446 |
| 19 | ರಾಯಚೂರು | 19712 |
| 20 | ರಾಮನಗರ | 17144 |
| 21 | ತುಮಕೂರು | 29358 |
| 22 | ಉತ್ತರ ಕನ್ನಡ | 10401 |
| 23 | ವಿಜಯನಗರ | 14454 |
| 24 | ವಿಜಯಪುರ | 31846 |
| 25 | ಯಾದಗಿರಿ | 6200 |
| 26 | ಚಿಕ್ಕಮಗಳೂರು | 25816 |
| 27 | ದಕ್ಷಿಣ ಕನ್ನಡ | 32784 |
| 28 | ಹಾಸನ | 36510 |
| 29 | ಕೊಡಗು | 13788 |
| 30 | ಶಿವಮೊಗ್ಗ | 30135 |
| 31 | ಉಡುಪಿ | 38074 |
| ಒಟ್ಟು | | 1005551 |



LD-LET/480/2025-LD_DO_3-LABOUR SEC (Computer No. 1985075)
ed from eOffice by PRAVEEN HANNI, LD-US-DO3(PH), UNDER SECRETARY, LABOUR SEC on 08/12/2025 04:59 PM